ಪತ್ರಗಳನ್ನು ಕಳುಹಿಸುವವರು ಅತ್ಯಂತ ದೊಡ್ಡ ದುಷ್ಕರ್ಮಿಗಳು. ಅಂತಹ ಪತ್ರಗಳ ಪೈಕಿ ಒಂದರಲ್ಲಿ ನನಗೂ ಬ್ಯಾಂಕಿನ ಗುಡಿಸುವ ಕೆಲಸ ಮಾಡುವ ಲೀಲಾಮಣಿಗೂ ಅನೈತಿಕ ಸಂಬಂಧವಿದೆಯೆಂದು ಬರೆಯಲಾಗಿತ್ತು. ಲೀಲಾಮಣಿ ನೋಡಲು ಪರವಾಗಿಲ್ಲ ಎನ್ನುವಂತಿದ್ದಾಳೆ. ಎರಡು ಮಕ್ಕಳ ತಾಯಿ, ವಿಧವೆ. ವಿಧವೆಯ ಮೇಲೆ ಸಾಮಾನ್ಯವಾಗಿ ಎಲ್ಲರ ಅನುಕಂಪವಿರುತ್ತದೆ. ವಿಧವೆಯನ್ನು ಹೇಗಾದರೂ ತನ್ನತ್ತ ಸೆಳೆಯಬೇಕೆಂದು ಎಲ್ಲರೂ ಪ್ರಯತ್ನಿಸುವುದು ಹೊಸತೇನೂ ಅಲ್ಲ. ಅದಕ್ಕೆ ಸಾಧ್ಯವಾಗದಿದ್ದರೆ ಅವಳ ಕುರಿತು ಇಲ್ಲದ ಕತೆಗಳನ್ನು ಹೆಣೆದು ಪ್ರಚಾರ ಮಾಡುತ್ತಾರೆ ಅಥವಾ ಅನಾಮಧೇಯ ಪತ್ರಗಳನ್ನು ಬರೆಯುತ್ತಾರೆ. ಒಮ್ಮೆ ಅವಳು ನನ್ನ ಕನಸಿನಲ್ಲಿ ಬಂದಿದ್ದು ಬಿಟ್ಟರೆ, ನಮ್ಮಿಬ್ಬರ ನಡುವೆ ಇನ್ನು ಯಾವುದೇ ರೀತಿಯ ಸಂಬಂಧವಿರಲಿಲ್ಲ. ಒಮ್ಮೆ ಕೂಡ ಲೀಲಾಮಣಿಯೊಂದಿಗೆ ಕೆಟ್ಟದಾಗಿ ನಡೆದುಕೊಂಡಿಲ್ಲ, ಮಾತನಾಡಿಲ್ಲ. ಅನಾಮಧೇಯ ಪತ್ರವಾದರೂ ಬೆಂಕಿಯಿಲ್ಲದೆ ಹೊಗೆಯಾಡಲಾರದು ಎಂಬ ಮಾತನ್ನು ಎಲ್ಲರೂ ಹೇಳುತ್ತಾರೆ. ತಾನದನ್ನು ನಂಬಲಾರೆನೆಂದು ಶ್ರೀದೇವಿ ಆಣೆ ಹಾಕಿ ಹೇಳುತ್ತಿದ್ದರೂ ಅವಳ ಕಣ್ಣುಗಳಲ್ಲಿ ಅಪನಂಬಿಕೆಯ ಒಂದು ಪುಟ್ಟ ಕಿರಣ ಪ್ರಕಟವಾಗಿತ್ತು.

ನನ್ನ ಪೂರ್ವಕಾಲದ ಚರಿತ್ರೆಯ ರಚನೆಯಾಗಿತ್ತು ಮತ್ತೊಂದು. ಊರಿನಲ್ಲಿ ಒಂದು ಹೆಣ್ಣಾಗಳೊಂದಿಗೆ ಸಂಬಂಧವಿರಿಸಿಕೊಂಡಿದ್ದು, ಚೆನ್ನಾಗಿ ಪೆಟ್ಟು ತಿಂದ ಮೇಲೆ ಊರು ಬಿಟ್ಟವನೆಂದು ಬರೆಯಲಾಗಿತ್ತು. ಊರಿನ ಮಡಿವಾಳ ಹೆಂಗಸಿನಲ್ಲಿ ನನಗೊಂದು ಮಗುವಿದೆಯಂತೆ. ಆ ಮಗು ತನ್ನನ್ನೇ ಹೋಲುತ್ತದೆಯೆಂದು ತಿಳಿಸಲಾಗಿತ್ತು. ನಂಬುವಂತೆ ಮಡಿವಾಳತ್ತಿಗೆ ಆಂಡಿಯ ಮಗಳು ಸೀತ ಎಂದೂ ಮಗುವಿಗೆ ಬಿಜು ಎಂದೂ ಹೆಸರು ಕೊಡಲಾಗಿತ್ತು. ಆದರೆ ಊರಿನ ಹೆಸರಾಗಲಿ ಮನೆಯ ಅಥವಾ ಅದರ ಸುತ್ತಮುತ್ತಲಿನ ವಿವರವಾಗಲಿ ಪತ್ರದಲ್ಲಿರಲಿಲ್ಲ. ನಂಬುವಂತಹ ಒಂದು ಕತೆ ಮಾತ್ರವೆಂದು ಶ್ರೀದೇವಿ ನಗುತ್ತಾ ಹೇಳಿದರೂ ಅವಳೂ ಒಂದು ಹೆಣ್ಣಲ್ಲವೆ? ಗಂಡನ ಕುರಿತು ಸುಳ್ಳು ಸುದ್ದಿ ಹೇಳಿದರೂ ಎಲ್ಲಾ ಹೆಣ್ಣುಗಳು ಅದನ್ನು ತಿರಸ್ಕರಿಸುತ್ತಾರೆ. ಆದರೂ ಅಂತಹ ಹೆಣ್ಮಕ್ಕಳ ಒಳಮನಸ್ಸು ಹೊಗೆಯಾಡದಿರುತ್ತದೆಯೇ? ಗಂಡನ ವಿವಾಹಪೂರ್ವ ಬದುಕು ಕೂಡ ತನ್ನದಾಗಿರಬೇಕೆಂದು ಹಟ ಮಾಡುವ ಶ್ರೀದೇವಿಯಂತಹ ಹೆಣ್ಣು.

ಮೂರನೆಯ ಪತ್ರ ನನ್ನ ವಿಳಾಸದಲ್ಲಿ ಮನೆಗೆ ಬಂದ ಒಂದು ಕಾಮಲೇಖನವಾಗಿತ್ತು. ಕಣ್ಣೀರಿನಿಂದ ಅಕ್ಷರಗಳು ಮಾಸಿದೆಯೆಂದು ತೋರುವ ಒಂದು ಪತ್ರ. ಬೇಕಂತಲೇ ತಪ್ಪುತಪ್ಪಾಗಿ ಬರೆಯಲಾಗಿತ್ತು. ಅವಳಿಗೆ ನಾನು ವಂಚಿಸುತ್ತಿದ್ದೇನೆಂಬಂತೆ ಬಿಂಬಿಸಲಾಗಿತ್ತು. ಅವಳನ್ನು ಅನುಭವಿಸಿದುದರ ಸೂಚನೆಯೂ ಆ ಪತ್ರದಲ್ಲಿತ್ತು. ನಾನು ಶ್ರೀದೇವಿಗೆ ಅವಳ ಕುರಿತು ವಯಲಾರ್ (ಮಲಯಾಳಂನ ಕವಿ) ಬರೆದಿದ್ದೆಂದು ಹೇಳುವ ಸಿನಿಮಾಗೀತೆಯ

## ಇಲ್ಲಿಯವರೆಗೆ



ಶ್ರೀಮಂಗಲದಲ್ಲಿನ ರಾಜಕಾರಣದ ಜಗತ್ತಿನಲ್ಲಿ ಅವನು ಮುಳುಗಿಹೋದ. ಬದಲಾದ ಜೀವನದಲ್ಲಿ ಸುಮಿತ್ರಾಳ ನೆನಪೂ ಮುಕ್ಕಾಗತೊಡಗಿತು. ಆ ಜಾಗದಲ್ಲಿ ಶ್ರೀದೇವಿ ಕಚಗುಳಿ ಇಡತೊಡಗಿದಳು. ಆಶ್ರಯ ಕೊಟ್ಟ ರಾಜಕೀಯ ನಾಯಕನೇ ಮಗಳನ್ನು ಕೊಟ್ಟು ಮನೆಯಳಿಯನನ್ನಾಗಿ ಮಾಡಿಕೊಂಡ. ಹೊಸ ಬದುಕು, ಹೊಸ ಕನಸುಗಳು. ಆದರೆ, ರಾಜಕೀಯ ಕುಟುಂಬದಲ್ಲೇ ಬೆಳೆದಿದ್ದ ಶ್ರೀದೇವಿಗೆ ರಾಜಕಾರಣ ಎಂದರೆ ಅಸಹ್ಯ ಹುಟ್ಟಿಸುತ್ತಿತ್ತು. ತನ್ನ ಗಂಡ ರಾಜಕಾರಣದಿಂದ ಆದಷ್ಟೂ ದೂರವಿರಬೇಕು ಎನ್ನುವುದು ಅವಳ ಒತ್ತಾಸೆಯಾಗಿತ್ತು. ಇದರ ನಡುವೆ, ಶ್ರೀದೇವಿಯ ಅಮ್ಮ ಸುಮಕ್ಕ ರಾಜಕೀಯದ ಚದುರಂಗದಲ್ಲಿ ಗಂಡನಿಂದ ನಿಧಾನವಾಗಿ ದೂರವಾಗತೊಡಗಿದಳು.

ಒಂದು ಸಾಲು ದುರದೃಷ್ಟವಶಾತ್ ಅದರಲ್ಲಿತ್ತು. ಅದು ಶ್ರೀದೇವಿಯ ಮನಸ್ಸನ್ನು ತಟ್ಟಿತು. ನನ್ನ ಎಲ್ಲಾ ಪತ್ರಗಳನ್ನು ತೆರೆದು ಓದುವ ಸ್ವಾತಂತ್ರ್ಯ ಅವಳಿಗಿತ್ತು. ಅಂತೆಯೇ ಆ ಪತ್ರವನ್ನು ಅವಳು ಒಡೆದು ಓದಿದ್ದಳು.

ತಮಾಷೆಯಾಗಿ ಅವಳು ಆ ಪತ್ರದ ವಾಕ್ಯಗಳನ್ನು ಓದಿ ಹೇಳಿದರೂ ಅದು ಅವಳನ್ನು ಬಹಳಷ್ಟು ಆತಂಕಗೊಳಿಸಿತೆಂದು ನನಗನ್ನಿಸಿತು. ನನ್ನ ಎದೆಯನ್ನು ಬಗೆದು ತೋರಿಸಲು ಏನು ಮಾಡಲೆಂದು ನಾನು ಚಿಂತಾಕ್ರಾಂತನಾದೆ. ತೆರೆದು ತೋರಿದರೆ ಸುಮಿತ್ರ ಅಲ್ಲಿ ಕಾಣದಿರುವುದಿಲ್ಲ ಬೇಡ... ಏನೂ... ಬೇಡ.

ನನ್ನನ್ನು ಅಭ್ಯರ್ಥಿಯನ್ನಾಗಿ ಮಾಡುತ್ತಾರೆ ಎಂಬ ವದಂತಿ ಎಲ್ಲಾ ಕಡೆ ಹರಡಿತು. ಯುವ ನಾಯಕನಿಗೆ ಮತ ಹೆಚ್ಚಿಗೆ ಗಳಿಸಲು ಸಾಧ್ಯವೆಂಬ ವಾದವೂ ಎದ್ದುಬಂದಿತು. ನನ್ನನ್ನು ನಾಯಕನಂತೆ ಕಂಡಿರುವ ಮೂವರು ಯುವಕರು ನನಗೋಸ್ಕರ ವಾದ ಮಂಡಿಸಲು ರಾಜಧಾನಿಗೆ ಹೋಗಲು ತಯಾರಾಗುತ್ತಿದ್ದಾರೆಂದು ಯಾರೋ ಬಂದು ಹೇಳಿದರು. ನಿಜವಾಗಲೂ ನಾನು ಹೆದರಿದೆ. ಇವರೇನಾದರೂ ನನ್ನನ್ನು ಅಭ್ಯರ್ಥಿಯನ್ನಾಗಿ ಮಾಡಿದರೆ ನನ್ನ ಪರಿಚಯ ಜಗಜ್ಜಾಹೀರಾಗುತ್ತದೆ. ಅಪ್ಪ ಅಮ್ಮ ಜೀವಂತವಾಗಿದ್ದರೆ ಓಡಿ ಬಂದು ಬಿಡುತ್ತಾರೆ. ಮಾವ ಮತ್ತು ಸುಮಿತ್ರಾ ಕೂಡ ತಡಮಾಡಲಾರರು. ಅವರು ಬಂದರೆ...?

ಜೀವದ ಮೇಲೆ ಆಶೆಯಿಲ್ಲದವರು ಯಾರಿದ್ದಾರೆ? ಅದರ ಮುಂದೆ ಕೆಲವೊಮ್ಮೆ ಕುಟುಂಬ ಮತ್ತು ಹೆಂಡತಿ ಸಮಸ್ಯೆಯಾಗಲಾರರು. ಹೆಂಡತಿಗೋಸ್ಕರ ಗಂಡ ಜೀವ ಕಳೆದುಕೊಂಡು ಏನುಪಯೋಗ? ಅಮ್ಮನಿಗೆ ಪೆಟ್ಟು ಬೀಳುವಾಗ ಅಮ್ಮ ಮಗುವನ್ನೆತ್ತಿ ಕಂಕುಳಲ್ಲಿಟ್ಟು ಬೀಳುವ ಏಟನ್ನು ತಡೆಯಲೇ ಬೇಕು. ರಾಜಕೀಯಕ್ಕೋಸ್ಕರ ತನ್ನ ಜೀವನವನ್ನೇ ಕಳೆದುಕೊಂಡರೆ ಏನು ಸಾಧಿಸಿದಂತಾಗುತ್ತದೆ? ಹುತಾತ್ಮರಾದವರಿಗೆ ಘೋಷಣೆಗಳು, ಹೂವಿನ ಚಿತ್ರಗಳು, ಸ್ತೂಪಗಳಲ್ಲದೆ ಇನ್ನೇನು ಉಳಿದಿರುತ್ತದೆ? ಅದು ಕೂಡ ಯಾವುದಕ್ಕೂ ಉಪಯೋಗವಿಲ್ಲದ ಈ ಪಕ್ಷಕ್ಕೋಸ್ಕರ ಹುತಾತ್ಮರಾಗುವುದೆ! ಹುತಾತ್ಮರು ಜಾಥಾ ನಡೆಸುವ ಒಂದು ದೃಶ್ಯ ಮನಸ್ಸಿನಲ್ಲಿ ಎದ್ದುಬಂತು. ಏಟಿನ, ಗುದ್ದಿನ, ಗುಂಡಿನ ಮುಂದೆ ಎದೆ ಅರಳಿಸಿ ನಿಲ್ಲಬೇಡ ಎಂಬುದು ಅವರ ಘೋಷವಾಕ್ಯಗಳಾಗಿರಬಹುದು. ನಾನು ಹುತಾತ್ಮನಾಗಿ ಅಂಕಲ್ ಅಥವಾ ಸುಮಕ್ಕಂದಿರು ರಕ್ಷಣೆ ಪಡೆಯುವುದು ಬೇಡ.

ಕತ್ತಲೆಯಲ್ಲಿ ಏಟು ಬಿದ್ದಾಗ ನನ್ನ ಚಿಂತನೆಗಳಿಗೆ ಒಂದು ಖಚಿತತೆಯುಂಟಾಯಿತು. ಒಂದನೆಯ ಏಟಿಗೇ ನಾನು ಕಂಬಿಕಿತ್ತೆ. ಅದು ಕೂಡ ನನ್ನೆಲ್ಲಾ ಶಕ್ತಿಯನ್ನು ಒಟ್ಟುಗೂಡಿಸಿದ ಓಟ. ಎರಡನೆಯ ಏಟು ಸಿಗದೇ ಇದ್ದಾಗ ನಾನು ಹಿಂತಿರುಗಿ ನೋಡಿದೆ. ನನ್ನ ಪಕ್ಕದಲ್ಲಿ ಯಾರೂ ಇರಲಿಲ್ಲ. ಪ್ರಖರವಾದ ಬೆಳಕು ಬೀರುವ ಬಲವಾದ ಟಾರ್ಚ್ ನನ್ನ ಕೈಯಲ್ಲಿತ್ತು. ಟಾರ್ಚ್‌ನ ಬೆಳಕನ್ನು ಹಿಂದಕ್ಕೆ ಚೆಲ್ಲಿದೆ. ಆಗ ಕಪ್ಪು ಬಟ್ಟೆಯಿಂದ ಮುಖ ಮುಚ್ಚಿದ ಒಬ್ಬ ವ್ಯಕ್ತಿ ಓಡಿಬರುತ್ತಿರುವುದನ್ನು ಕಂಡೆ. ಅವನ ಕೈಯಲ್ಲೊಂದು ಮಚ್ಚೂ ಇತ್ತು. ಟಾರ್ಚ್ ಭಾರವಿದ್ದುದರಿಂದ ಅದನ್ನು ನಾನು ದೂರಕ್ಕೆಸೆದು ಓಡತೊಡಗಿದೆ. ಇದಕ್ಕೆ ಏನು ಮ್ಯಾರಥಾನ್ ಎಂದು ಹೇಳುವುದು? ಕತ್ತಲೆ ದಾರಿಯ ಮ್ಯಾರಥಾನ್ .

'ಇನ್ನು ರಾತ್ರಿ ಹೊರಗೆ ಹೋಗುವುದು ಬೇಡ'. ಶ್ರೀದೇವಿ ಬುದ್ಧಿ ಹೇಳಿದಳು.

'ನಾವು ಒಂದು ಆಯುಧವನ್ನು ಇಟ್ಟುಕೊಳ್ಳಬೇಕು. ಒಂದು ಬಂದೂಕನ್ನು ಕೊಂಡು ತಲೆದಿಂಬಿನ ತಳದಲ್ಲಿಡಬೇಕು.'

'ಅಯ್ಯೋ' ಒಮ್ಮೆಗೆ ನಾನು ಕೂಗಿಕೊಂಡೆ. ಕಾರಣ ಬಂದೂಕು ಅಂದರೇ ನನಗೆ ಭಯ. ಮಾವನ ಬಂದೂಕನ್ನು ಮನೆಯ ಮೂಲೆಯಲ್ಲಿ ಒರಗಿಸಿಟ್ಟಿದ್ದರು. ಅದನ್ನು ಕಂಡಾಗ ನಾನು ಭಯಭೀತನಾಗಿದ್ದೆ. ಬಂದೂಕು ಮನೆಯಲ್ಲಿದ್ದರೆ ಸಾವು ಖಚಿತ. ಕೋಪ ಬಂದಾಗ ಬೇರೊಬ್ಬರಿಗೆ ಗುಂಡು ಹೊಡೆಯಬೇಕು. ನಿರಾಶೆ, ಸಂಕಟಗಳು ಬಂದಾಗ ತನಗೆ ತಾನೇ ಗುಂಡು ಹೊಡೆದು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಏಕೆ